ಮೂಲರೂಪದಲ್ಲಿಯೇ ಹೇಳುವುದು ಎಷ್ಟು ಸರಿ? ಈ ಜಿಜ್ಞಾಸೆಯೊಂದಿಗೆ, ಸಿಂಡ್ರೆಲಾ ಕಥೆಯನ್ನು ಮರು ನಿರೂಪಿಸಿದ ಚಿತ್ರವೊಂದು 'ನ್ಯೂ ಸಿಂಡ್ರೆಲಾ ಸ್ಟೋರಿ' ಹೆಸರಿನಲ್ಲಿ ರೂಪುಗೊಂಡು, ಸಹೃದಯರ ಗಮನಸೆಳೆದಿದೆ. ಈ ಮರು ನಿರೂಪಣೆಯು ಸ್ಥಾಪಿತವಾದ ಅನೇಕ ಸಿದ್ಧಮಾದರಿಗಳನ್ನು ಮುರಿಯುವ ಪ್ರಯತ್ನ ಮಾಡಿತು. ನಮ್ಮ ಸಾಮಾಜಿಕತೆಯ ಅನೇಕ ಆಯಾಮಗಳ ಚರ್ಚೆಗೆ ಈ ಚಿತ್ರವು ಅನುವು ಮಾಡಿಕೊಟ್ಟದ್ದರಿಂದ, ಮಕ್ಕಳ ಕಥೆಗಳ ಕ್ಷೇತ್ರದಲ್ಲಿಯೂ, ದೊಡ್ಡವರ ದೃಷ್ಟಿಕೋನವನ್ನು ಬದಲಾಯಿಸುವ ಉದ್ದೇಶದಿಂದಲೂ 'ನ್ಯೂ ಸಿಂಡ್ರೆಲಾ ಸ್ಟೋರಿ' ಸಿನಿಮಾ ಒಂದು ಮಾದರಿಯಾಗಿ ಗುರುತಿಸಿಕೊಂಡಿದೆ.

### ಸಿಂಡ್ರೆಲಾಗೆ ಹೊಸ ಹೊಳಪು

ಮರುನಿರೂಪಣೆಗೊಂಡ ಕಥೆಯಲ್ಲಿಯೂ ಚೆಲುವೆಯಾದ ಸಿಂಡ್ರೆಲಾಳ ಮಲತಾಯಿ ಕೆಟ್ಟವಳೇ ಹೌದು. ಆದರೆ, ಅವಳ ಮಲಸೋದರಿಯರು ಕೆಟ್ಟವರಲ್ಲ. ದೊಡ್ಡಕ್ಕನ ಬಗ್ಗೆ ತುಸುವಾದರೂ ಕರುಣೆದೋರು ಎಂದವರು ಅಮ್ಮನನ್ನು ಓಲೈಸಲು ಪ್ರಯತ್ನಿಸುತ್ತಾರೆ. ಈ ಕಥೆ, ಮಲತಾಯಿಯನ್ನು ವಿಲನ್ ಆಗಿ ಚಿತ್ರಿಸುವ ಬದಲು, ಅವಳ ಮನಸ್ಥಿತಿಯನ್ನು ಶೋಧಿಸಲು ಪ್ರಯತ್ನಿಸಿದೆ. ಇಬ್ಬರು ಹೆಣ್ಣುಮಕ್ಕಳ ಜವಾಬ್ದಾರಿ ಹೊತ್ತ ತಾಯಿಯ ಸಂಕಷ್ಟ, ಅವಳ ಮನಸ್ಸಿನೊಳಗಿನ ಆತಂಕ ಯಾವ ಬಗೆಯದು ಎಂಬುದನ್ನು ಚಿತ್ರದಲ್ಲಿ ಅತ್ಯಂತ ಸಹಜವಾಗಿ ತೋರಿಸಲಾಗಿದೆ. ಸಿಂಡ್ರೆಲಾಳಿಗೂ ಚಿಕ್ಕಮ್ಮನ ಕಷ್ಟಗಳು ಅರ್ಥವಾಗುವುದರಿಂದ ಅವಳು ಅವರನ್ನು ದ್ವೇಷಿಸುವುದಿಲ್ಲ. ಮುಖ್ಯವಾಗಿ, ಸೌಂದರ್ಯ ಮತ್ತು ಕುರೂಪದ ನಡುವೆಯಿದ್ದ ಭದ್ರವಾದ ಗೋಡೆಯೊಂದು ಈ ಮರುನಿರೂಪಿತ ಕಥೆಯಲ್ಲಿ ಕಾಣುವುದಿಲ್ಲ. ಎರಡನೆಯದಾಗಿ, ಹೆಣ್ಣಿಗೆ ಹೆಣ್ಣೇ ಶತ್ರುವೆಂಬ ಕ್ಲೀಷೆಯಂತಹ ಒಣ ಹೇಳಿಕೆಗೆ ಪುಷ್ಟಿ ನೀಡುವ ಸನ್ನಿವೇಶಗಳು ಇಲ್ಲಿಲ್ಲ. ಕಥೆಯಲ್ಲಿ ಇನ್ನೂ ಹಲವು ಬದಲಾವಣೆಗಳಿವೆ. ಸಿಂಡ್ರೆಲಾಳನ್ನು ಪ್ರೀತಿಸುವ ರಾಜಕುಮಾರ, ತನ್ನನ್ನು ಮದುವೆಯಾಗುವಂತೆ ಆಕೆಯಲ್ಲಿ ಪ್ರೇಮನಿವೇದನೆ ಮಾಡಿದಾಗ, ಆಕೆಯು ಅಬಲೆಯೊಬ್ಬಳಿಗೆ ಆಸರೆ ದೊರೆಯಿತೆಂದು ಖುಷಿಪಟ್ಟು ಶರಣಾಗುವುದಿಲ್ಲ. ಬದಲಾಗಿ ತನ್ನ ನಿಲುವನ್ನು ಸ್ಪಷ್ಟವಾಗಿ ಹೇಳುತ್ತಾಳೆ. 'ನಾನು ನಿನ್ನನ್ನು ಪ್ರೀತಿಸುತ್ತೇನೆ. ಆದರೆ ಜೀವನದಲ್ಲಿ ನನ್ನದೇ ಆದ ಕೆಲವು ಗುರಿಗಳಿವೆ. ಅವುಗಳನ್ನು ಸಾಕಾರಗೊಳಿಸಲು ನನಗೆ ಅವಕಾಶ ಕೊಡಬೇಕು' ಎನ್ನುತ್ತಾಳೆ. ಅತ್ತ ರಾಜಕುಮಾರನಿಗೂ ಆ ಹುದ್ದೆ ಪದವಿಯ ಬಂಧನ ಬೇಕಾಗಿರುವುದಿಲ್ಲ. ಅವನೂ ತನ್ನ ಜೀವನದ ದೃಷ್ಟಿಕೋನದ ಕುರಿತು ಅವಳಿಗೆ ವಿವರಿಸುತ್ತಾನೆ. 'ಇಬ್ಬರೂ ತಮ್ಮ ತಮ್ಮ ಗುರಿ ಸಾಧನೆಗೆ ಜೊತೆಯಾಗಿ ಹೆಜ್ಜೆ ಹಾಕೋಣ. ಇಬ್ಬರ ವೈಯಕ್ತಿಕ ಸ್ಪೇಸ್ ಅನ್ನು ಗೌರವಿಸಿ ಬಾಳುವೆ ಮಾಡೋಣ' ಎಂದು ನಿರ್ಧರಿಸುತ್ತಾರೆ. ಅಷ್ಟೇ ಅಲ್ಲ, ರಾಜಕುಮಾರನ ಸೋದರಿಯು ಮಹತ್ವಾಕಾಂಕ್ಷಿ ಹುಡುಗಿ. ಆದರೆ ಅಧಿಕಾರವು ಅನುವಂಶೀಯವಾಗಿ ಗಂಡುಮಕ್ಕಳಿಗೇ ಮೀಸಲು ಎಂಬ ನಿಯಮದಿಂದಾಗಿ ಆಕೆಗೆ ರಾಜಕೀಯ ಪ್ರವೇಶಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ರಾಜಕುಮಾರನಿಗೆ ರಾಜಕೀಯ ಹುದ್ದೆಯ



## ಕಾಲ ಬದಲಾಗಿದೆ, ಕಥೆಯೂ ಬದಲಾಗಲಿ, ಹೊಸತಾಗಲಿ!

ಪಾಲನೆ ಪೋಷಣೆಯ ಒಂದು ಭಾಗವೇ ಕಥೆ ಹೇಳುವಿಕೆ. ಕಥೆ ಹೇಳುವ ಅಮ್ಮ ಅಥವಾ ಅಪ್ಪ ಸೂಕ್ಷ್ಮ ಮನಸ್ಥಿತಿಯವರಾಗಿದ್ದರೆ – ರಾಜಕುಮಾರಿಯನ್ನು ಅತ್ಯಂತ ಸುಂದರಿಯೆಂದೂ, ಅವಳಿಗೆ ಕಾಟ ಕೊಡುವ ಮಲಸೋದರಿಯನ್ನು ಕುರೂಪಿ ಎಂದೂ ಬಣ್ಣಿಸುವುದು ಸಾಧ್ಯವಿಲ್ಲ. ಆಗ ಸಹಜವಾಗಿಯೇ ಕಥೆಗಳು ಮರುನಿರೂಪಿತವಾಗುತ್ತವೆ. ಪೋಷಕರೇ ಕಥೆಯನ್ನು ಹೇಳುವಾಗ ತಾವೇ ಕಥೆಯನ್ನು ತಿದ್ದಲು ಶುರು ಮಾಡುತ್ತಾರೆ. ಅದಕ್ಕೇ ಇರಬೇಕು, ಜಾನಪದ ಕಥೆಗಳಲ್ಲಿ ಹೆಣ್ಣಿನ ಪಾತ್ರ ಚಿತ್ರಣ 'ಅಬಲೆ' ಎಂಬ ರೀತಿಯಲ್ಲಿ ಮೂಡಿ ಬಂದಿರುವುದು ಬಹಳವೇ ಕಡಿಮೆ. ಆಕೆ ಗಟ್ಟಿಗಿತ್ತಿಯಾಗಿ, ಎಲ್ಲ ಸಮಸ್ಯೆಗಳನ್ನು ಎದುರಿಸಿ ನಿಲ್ಲುವ ದಾಢಸಿ ಮಹಿಳೆಯಾಗಿಯೇ ಕಾಣಿಸಿಕೊಳ್ಳುತ್ತಾಳೆ. ಏಳುಮಲ್ಲಿಗೆ ತೂಕದ ರಾಜಕುಮಾರಿ ಎಂಬ ಪರಿಕಲ್ಪನೆಗೆ ಬದಲಾಗಿ ಹೆಣ್ಣು ಶ್ರಮಜೀವಿಯಾಗಿ ಬದುಕು ಕಟ್ಟಿಕೊಳ್ಳುವ ಕಥೆಗಳೇ ಜಾನಪದದಲ್ಲಿ ಹೆಚ್ಚಾಗಿವೆ ಎಂದು ಗುರುತಿಸುತ್ತಾರೆ ಸವಿತಾ ಬನ್ನಾಡಿ.

ಪಾಲನೆ ಪೋಷಣೆಯ ಪರಿಕಲ್ಪನೆಯೂ ಈಗ ಅಗಾಧವಾಗಿ ಬದಲಾಗಿದೆ. ಮಕ್ಕಳ ಕೈಯಲ್ಲಿರುವ ವಸ್ತುವೊಂದನ್ನು 'ಕಾಗೆ ಕೊಂಡೋಯ್ತು...' ಎಂದು ಕಾಗೆ ತೋರಿಸಿ ಕಿತ್ತುಕೊಳ್ಳುವುದು ಸರಿಯಲ್ಲ ಎಂಬುದು ಹೊಸ ತಲೆಮಾರಿನ ಪೋಷಕರು ಕಂಡುಕೊಂಡ ವಿಚಾರ. ಮಕ್ಕಳಿಗೆ ಪ್ರತಿಯೊಂದನ್ನು ವಿವರಿಸಿ, ತಿಳಿಹೇಳಬೇಕು. ಕಾಗೆ ಕೊಂಡು ಹೋಗುವುದು, ವಸ್ತುವೊಂದು ಮಾಯವಾಗುವುದು ಅಥವಾ ಮತ್ತೊಂದು ಜನ್ಮವೆತ್ತಿ ಬರುವ ಕಲ್ಪನೆಗಳಿಗೆ ಬದಲಾಗಿ, ಇರುವ ಜಗತ್ತನ್ನು ಇರುವ ಹಾಗೆಯೇ ತಾರ್ಕಿಕವಾಗಿ ಒಪ್ಪಿಕೊಳ್ಳುವಂತೆ ಮಕ್ಕಳಿಗೆ ಕಲಿಸಬೇಕು ಎಂದು ಇಂದಿನ ಪೋಷಕರು ನಂಬುತ್ತಾರೆ. ಈ ನಿಟ್ಟಿನಲ್ಲಿ ಅವರಿಗಾಗಿ ಹೇಳುವ ಕಥೆಗಳು ಹೇಗಿರಬೇಕು ಎಂಬುದನ್ನು ಸಾಕಷ್ಟು ಮುಂಚಿತವಾಗಿಯೇ ಯೋಚಿಸಬೇಕು, ಅದು ಅವರ ಮುಂದಿನ ಬದುಕನ್ನು ರೂಪಿಸುತ್ತದೆ. ಯಾವುದಾದರೊಂದು ವಿಷಯ ಮಕ್ಕಳಿಗೆ ಅರ್ಥವಾಗುವುದಿಲ್ಲ ಎನ್ನುವುದು ದೊಡ್ಡ ಸುಳ್ಳು. ಮಗು ಅರ್ಥ ಮಾಡಿಕೊಳ್ಳುವಂತೆ ಹೇಳುವುದೇ ದೊಡ್ಡವರ ಮುಂದಿರುವ ಸವಾಲು ಎಂಬುದು ನಿತೀಶ್ ಕುಂಟಾಡಿ ಅವರ ಅನುಭವದ ಮಾತು.